M.V.C .NO. 624/2022
RW-1 .
Dated: 13-11-2025.

ಸಾಕ್ಷಿಯನ್ನು ಈ ದಿನ ದಿನಾಂಕ 13-11-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಮುಖ್ಯ ವಿಚಾರಣೆಃ ಎದುರುದಾರನ ಪರವಾಗಿ ಶ್ರೀ ಯು ಸಿ ಎಚ್ ವಕೀಲರಿಂದಃ

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಕುರಿತು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಕುರಿತು ಸಲ್ಲಿಸಿರುತ್ತೇನೆ, ಅದರಲ್ಲಿ ಬರೆದಿರುವ ಎಲ್ಲ ಸಂಗತಿಗಳು ನನ್ನ ಜ್ಞಾನ ಮತ್ತು ತಿಳುವಳಿಕೆ ಮೇರೆಗೆ ನಿಜ ಇದ್ದು , ಅದರಲ್ಲಿರುವ ಸಹಿ ನಾನೇ ಮಾಡಿರುತ್ತೇನೆ.

ಸಾಕ್ಷಿದಾರರು ತಾವು ಹಾಜರ ಪಡಿಸಿದ ಅಧಿಕಾರ ಪತ್ರ ನಿಆರ-1, ವಿಮಾ ಪಾಲಿಸಿಯ ನಕಲು ನಿಆರ-2 ಅಂತಾ ಗುರುತಿಸಲಾಯಿತು .

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಮ್ ಎಮ್ ಎ ವಕೀಲರಿಂದಃ

ನನ್ನ ಸಾಕ್ಷಿ ಪ್ರಮಾಣ ಪತ್ರ ಬರೆಯಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ವಾಹನ ಸಂಖ್ಯೆ ನಮೂದಿಸಿರುವುದಿಲ್ಲ ಎಂದರೆ ನಿಜ. ಅಪಘಾತ ಸಮಯದಲ್ಲಿ ಮೋಟರ ಸೈಕಲ ನಂ. ಕೆ ಎ 24 ಡಬ್ಲೂ 9092 ನೇದ್ದಕ್ಕೆ ವಿಮಾ ಪಾಲಸಿ ಜಾರಿ ಮಾಡಿದ್ದೇವೆ ಎಂದರೆ ಸರಿ. ಅಪಘಾತ ಸ್ಥಳ ಕ್ಕೆ ನಾನು ಬೇಟಿ ನೀಡಿಲ್ಲ ಎಂದರೆ ಸರಿ. ನಮ್ಮ ಕಂಪನಿಯಿಂದ ಖಾಸಗಿ ತನಿಖೆ ಮಾಡಿಸಿದ್ದೇವೆ. ಸದರಿ ತನಿಖಾ ವರದಿ ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಸದರಿ ತನಿಖಾ ವರದಿ ನಮ್ಮ ಹೊಣೆಗಾರಿಕೆ ತಪ್ಪಿಸಿಕೊಳ್ಳಲು ಉದ್ದೇಶ ಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಮೃತ ಯಲ್ಲಪ್ಪ

M.V.C .NO. 624/2022
RW-1 .
Dated: 13-11-2025.

ಪಾಲಸಿಯ ಥರ್ಡ ಪಾರ್ಟಿ ಇರುತ್ತಾನೆ ಎಂದರೆ ಸಾಕ್ಷಿ ವಾಹನ ಖರೀದಿದಾರ ಇರುತ್ತಾನೆ ಎಂದು ನುಡಿದಿರುತ್ತಾರೆ. ಹೈಬಿಮ ಲೈಟ ವಾಹನ ಎದುರಿನಿಂದ ಬಂದಿದ್ದರಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಚಾರ್ಜಶೀಟನ್ನು ಪ್ರಶ್ನಿಸಿ ಮೆಲ್ಮನವಿ ಸಲ್ಲಿಸಿಲ್ಲ. ನಮ್ಮ ವಿಮಾ ಕಂಪನಿ ಥರ್ಡ ಪಾರ್ಟಿ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಪರಿಹಾರ ಹಣ ಕೊಡಲು ನಮ್ಮ ಕಂಪನಿ ಸಂಪೂರ್ಣ ಬಾಧ್ಯಸ್ತರು ಇರುತ್ತೇವೆ ಎಂದರೆ ಸರಿಯಲ್ಲ. ಸದರಿ ಪರಿಹಾರ ಹಣ ಕೊಡುವ ಬಾಧ್ಯಸ್ತಿಕೆ ತಪ್ಪಸಿಕೊಳ್ಳಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 1 ಮತ್ತು 2 ನೇ ಎದುರುದಾರ ಮತ್ತು ಅವರ ಪರ ವಕೀಲರನ್ನು ಕೂಗಿಸಲಾಗಿ ಗೈರು ಹಾಜರು ಇರುತ್ತಾರೆ. ಆದ್ದರಿಂದ 1 ಮತ್ತು 2 ನೇ ಎದುರುದಾರರ ಪರ ಸಾಕ್ಷಿಯ ಪಾಟಿ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಬೈಲಹೊಂಗಲ.